# ಮಾನವೀಯ ನಟನ ಅಂತ್ಯ ದುಃಖಕರ



ಒಬ್ಬ ಬಾಲ ನಟನಾಗಿ ಕನ್ನಡ ಚಿತ್ರ ರಂಗ ಪ್ರವೇಶಿಸಿದ ಪುನೀತ ರಾಜ ಕುಮಾರ ಅವರು, ಡಾ|| ರಾಜ ಕುಮಾರ ರವರಂತೆಯೇ ಕನ್ನಡ ಚಿತ್ರರಂಗದಲ್ಲಿ ಕೋಟ್ಯಾಂತರ ಅಭಿಮಾನಿಗಳನ್ನು ಹೊಂದಿದ್ದರು. ಬಾಲ ನಟನಾಗಿ ರಾಜಕುಮಾರ ಅಭಿನಯದ 'ಬೆಟ್ಟದ ಹೂವು' ಚಲನಚಿತ್ರ ರಾಷ್ಟ್ರ ಪ್ರಶಸ್ತಿ ಪಡೆದು ಇಡೀ ಕನ್ನಡ ಚಿತ್ರರಂಗದ ಗಮನ ಸೆಳೆದದ್ದು ಇನ್ನೂ ಜನಮಾನಸದಲ್ಲಿ ಉಳಿದಿದೆ. ನಾಯಕ ನಟನಾಗಿ ಪುನೀತ ರಾಜ ಕುಮಾರ ಅಭಿನಯಿಸಿದ 'ವೀರ ಕನ್ನಡಿಗ' 'ರಾಜ ಕುಮಾರ' 'ನಟಸಾರ್ವಭೌಮ' ಸೇರಿದಂತೆ ಅನೇಕ ಚಿತ್ರಗಳಲ್ಲಿಯ ಅವರ ಅದ್ಭುತ ನಟನಾ ಪ್ರತಿಭೆ ಕನ್ನಡಿಗರ ಮನಸೂರೆಗೊಂಡಿತ್ತು. ಪುನೀತ ರಾಜಕುಮಾರ್ ಅವರ ಸಾಮಾಜಿಕ ಕಳಕಳಿ, ನೊಂದವರಿಗೆ ನೆರವು ನೀಡುವ ಮಾನವೀಯ ಗುಣಗಳು ಎಲ್ಲರಿಗೂ ಮಾದರಿಯಾಗಿವೆ.

ಪುನೀತ್ ರಾಜಕುಮಾರ ಅವರ ಅಕಾಲಿಕ ನಿಧನ ಸಮಸ್ತ ಚಿತ್ರರಂಗ ಮತ್ತು ಇಡೀ ಕನ್ನಡ ನಾಡಿಗೆ ತುಂಬಲಾರದ ನಷ್ಟವನ್ನುಂಟು ಮಾಡಿದೆ.

**ಬಸವರಾಜ ಹೊರಟ್ಟಿ**
**ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ**

ಉದಯಕಾಲ 30.10.2021